ಮಗನೆಂದಾಡಿಸುವಳು ಜಗದುದರನ್ನ ಆನಂದದಿ ಗೋಪಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 5.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 428.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 92.
4. **Note:** Lyrics as per Ref. 1 are given without highlights. These lyrics have 11 stanzas. The wordings in Ref. 2 are marked in yellow highlights. The wordings in Ref. 3 are almost similar to Ref. 2.
5. **Note:** Ankita is different in these books. We have considered book in Ref.1 as standard and taken that Ankita for listing.

ರಾಗ: ಮೋಹನ ತಾಳ: ಅಟ

ಮಗನೆಂದಾಡಿಸುವಳು
ಮೊಗ ನೋಡಿ ನಗುವಳು ॥ ಪ ॥

ಜಗದುದರನ ತನ್ನ ಮಗನೆಂದೆನಿಸಿಕೊಂಡು
ಬಿಗಿದಪ್ಪುವ ಪುಣ್ಯವೆಲ್ಲಿ ಪಡೆದಳೊ ॥ ಅಪ ॥

ಶಶಿಧರ ಬ್ರಹ್ಮ ಸುರಾಸುರ ಮುನಿಗಳು
ವಸುಮತಿ ಸಹಿತ ಉದರದಲ್ಲಿಹ
ಶಶಿಮುಖಿ ಸಾಸಿರ ಪೆಸರುಗಳವನಿಗೆ
ಹೆಸರನಿಡುವ ಪುಣ್ಯವೆಲ್ಲಿ ಪಡೆದಳೊ ॥ ೧ ॥

ಸಾಗರಪತಿಯಾದ ಭೋಗಿ ಶಯನನನು
ಯೋಗನಿದ್ರೆಯೊಳಿಪ್ಪ ದೇವನನು
ಆಗಮ ತತಿಗಳಿಂದರಸಿ ಕಾಣದವನ
ತೂಗಿ ಪಾಡುವ ಪುಣ್ಯವೆಲ್ಲಿ ಪಡೆದಳೊ ॥ ೨ ॥

ಪೊನ್ನ ಮಣೆಯ ಮೇಲೆ ಚಿಣ್ಣನ ಕುಳ್ಳಿರಿಸಿ
ಎನ್ನ ಮುದ್ದು ಮೋಹನ ಬಾ ಎನುತ
ಹೊನ್ನ ತಾ ಗುಬ್ಬಿ ತಾ ಹೊನ್ನ ತಾ ಎನ್ನುತ

ರಾಗ: ಶಂಕರಾಭರಣ ತಾಳ: ಅಟ

ಮಗನೆಂದಾಡಿಸುವಳು ಜಗದುದರನ್ನ
ಆನಂದದಿ ಗೋಪಿ

ಕುಕ್ಷಿಯೊಳೀರೇಳು ಜಗವೆಲ್ಲವ ತಾಳಿ
ರಕ್ಷಿಸಿಕೊಂಡಿಹ ಬಲವಂತನ
ಪಕ್ಷಿವಾಹನ ದೇವ ಅಂಜಿದಂಜಿದನೆಂದು
ರಕ್ಷೆಯಿಡುವ ಪುಣ್ಯವೆಲ್ಲಿ ಪಡೆದಳೊ

ಸಾಗರಪತಿಯಾಗಿ ಭೋಗಿ ಶಯನದಲಿ
ಯೋಗನಿದ್ರೆಯೊಳಿಪ್ಪ ಆ ಕಂದನ
ಆಗಮ ಶ್ರುತಿಗಳು ಅರಸಿ ಕಾಣದ ವಸ್ತು
ತೂಗಿ ನೋಡುವ ಪುಣ್ಯವೆಲ್ಲಿ ಪಡೆದಳೊ

ವೇದತತಿಗಳಿಂದ ಬೋಧ ತಪಗಳಿಂದ
ಹೋದ ಹೊಲಬನರಿಯದಾತನ
ಬೀದಿಯಲಾಡುವ ಮಗನರಸಿ ವಿ-

ಬಣ್ಣಿಸಿಯಾಡುವ ಪುಣ್ಯವೆಲ್ಲಿ ಪಡೆದಳೊ ॥ ೩ ॥

ಕಾಲಲಂದುಗೆ ಕಂಕಣ ಸಣ್ಣ ಉಲಿಗೆಜ್ಜೆ
ಮಾಲೆ ಅರಳೆಲೆ ಕೊರಳ ಪದಕ
ಬಾಲದುಡಿಗೆಯಿಟ್ಟು ಬಾಲನ ಎತ್ತಿಕೊಂಡು
ಪಾಲ ಕುಡಿಸುವ ಪುಣ್ಯವೆಲ್ಲಿ ಪಡೆದಳೊ ॥ ೪ ॥

ಪಣೆಗೆ ತಿಲಕವನಿಟ್ಟು ಕೊರಳ ಪದಕ ಹಾರ
ಮಣಿ ಕಂಕಣವು ಘಳಿ ಘಳಿರೆನಲು
ಫಣಿಪತಿಶಯನನ ಕುಣಿಯೊ ಕುಣಿಯೊ ಎಂದು
ಕುಣಿಸಿ ನೋಡುವ ಪುಣ್ಯವೆಲ್ಲಿ ಪಡೆದಳೊ ॥ ೫ ॥

ವೇದತತಿಗಳಿಗೆ ಅಗೋಚರನಾದ ಸ-
ಮ್ಮೋದ ಸಮ್ಮೋಹಕನ
ಬೀದಿಯೊಳಾಡುವ ಮಗನ ಕರೆತಂದು ವಿ-
ನೋದವಾಡುವ ಪುಣ್ಯವೆಲ್ಲಿ ಪಡೆದಳೊ ॥ ೬ ॥

ಕುಕ್ಷಿಯೊಳೀರೇಳು ಭುವನಗಳನು ತಾಳಿ
ರಕ್ಷಿಸಿಕೊಂಡಿಪ್ಪ ಬಲವಂತನ
ಪಕ್ಷಿವಾಹನ ದೇವ ಅಂಜಿದ ಅಂಜಿದನೆಂದು
ರಕ್ಷೆಯಿಡುವ ಪುಣ್ಯವೆಲ್ಲಿ ಪಡೆದಳೊ ॥ ೭ ॥

ಒಣಗಿದ ತನು ತಲೆಜಡೆ ಕಣ್ಣ ಮುಚ್ಚುತ
ಪುಣವದ ಜಪಮಣಿ ಮಾಲೆಗಳ
ಎಣಿಪ ಯೋಗಿ ಸಮೂಹವರಸಿ ಕಾಣದವನ
ಅಣಕವಾಡುವ ಪುಣ್ಯವೆಲ್ಲಿ ಪಡೆದಳೊ ॥ ೮ ॥

ಬಿಡು ಬಿಡು ಬಾಲಕ ನಿಲ್ಲು ನಿಲ್ಲೋ ಎಂದು
ಕುಡಿ ಬೆರಳಿಂದ ಕರವನು ಪಿಡಿದು
ಅಡಿಯಿಡು ಮಗನೆ ಒಂದಡಿಯಿಡೊ ಎನುತಲಿ
ನಡೆಸಿ ನೋಡುವ ಪುಣ್ಯವೆಲ್ಲಿ ಪಡೆದಳೊ ॥ ೯ ॥

ಬಲಿಯ ಗೃಹಕೆ ಪೋಗಿ ತ್ರಿವಿಕ್ರಮ ರೂಪನಾಗಿ
ನೆಲವ ಈರಡಿ ಮಾಡಿದ ದೇವನ
ಲಲನೆ ತೊಡೆಯೊಳಿಟ್ಟು ತಲೆಯ ನೇವರಿಸುತ

ನೋದವಾಡುವ ಪುಣ್ಯವೆಲ್ಲಿ ಪಡೆದಳೊ

ಹೊನ್ನ ಮಣೆಯ ಮೇಲೆ ಚಿಣ್ಣನ ಕುಳ್ಳಿರಿಸಿ
ಎನ್ನ ಮೋಹದ ಮುದ್ದು ಮಗನೆನುತ
ಹೊನ್ನ ತಾ ಗುಬ್ಬಿ ತಾ ಹೊನ್ನ ಗುಬ್ಬಿಯೆಂದು
ಚಿಣ್ಣನಾಡಿಪ ಪುಣ್ಯವೆಲ್ಲಿ ಪಡೆದಳೊ

ಬಲಿಯಿತ್ತ ಧಾರೆಯ ಜಲವ ಕರದೊಳಿಟ್ಟು
ನೆಲವ ಈರಡಿ ಮಾಡಿದ ದೇವನ
ಲಲನೆ ತೊಡೆಯೊಳಿಟ್ಟು ತಲೆಯ ನೇವರಿಸುತ್ತ
ಮೊಲೆಯ ಕೊಡುವ ಪುಣ್ಯವಲ್ಲಿ ಪಡೆದಳೊ

ಮಡದಿ ಬಾಲಕನ ನಿಲ್ಲೋ ನಿಲ್ಲೋ ಎಂದು
ಬಿಡದೆ ಕೊನೆ ಬೆರಳಲ್ಲಿ ಕರ ಪಿಡಿದು
ಅಡಿಯಿಡು ಮಗನೆ ದಟ್ಟಡಿಯಿಡು ಇಡು ಎಂದು
ನಡೆಯ ಕಲಿಸುವ ಪುಣ್ಯವೆಲ್ಲಿ ಪಡೆದಳೊ

ಒಣಗಿದ ತನು ತಲೆಜಡೆ ಹಣೆಯಲಿ ನಾಮ
ಪುಣವ ಜಪದಿ ಮಣಿ ಮಾಲೆಯನೆಣಿಸಿ
ಮುನಿ ಜನಗಳೆಂದೂ ಅರಸಿ ಕಾಣದವನೊಳ್
ಅಣಕವಾಡುವ ಪುಣ್ಯವೆಲ್ಲಿ ಪಡೆದಳೊ

ಪಶುಪತಿ ಬ್ರಹ್ಮರು ಸುರ ಸಿದ್ಧ ಸಾಧ್ಯರು
ವಸುಧೆಯೊಳಗೆ ಬಂದು ಕಂದಿರಲು
ಶಶಿಮುಖಿ ಸಾಸಿರ ಪೆಸರುಳ್ಳ ದೇವನ
ಪೆಸರಿಡುವ ಪುಣ್ಯವೆಲ್ಲಿ ಪಡೆದಳೊ

ಮಂದಗಮನೆ ಆನಂದದಿ ನಿಟ್ಟಿಸಿ
ಕುಂದದೆ ಜಯ ಜಯವೆನುತಿರಲು
ಮಂದರಧರ ಪುರಂದರ ವಿಠಲನ
ಬಂದಪ್ಪುವ ಪುಣ್ಯವೆಲ್ಲಿ ಪಡೆದಳೊ

ಮೊಲೆಯನುಣಿಸುವ ಪುಣ್ಯವಲ್ಲಿ ಪಡೆದಳೊ ‖ ೧೦ ‖

ಮಂದಗಮನೆ ಜಗದ್ವಂದ್ಯನ ಕುಳ್ಳಿರಿಸಿಕೊಂಡು
ಕುಂದದೆ ಜಯ ಜಯವೆನುತಲಿರೆ
ಮಂದರೋದ್ಧರ ಶ್ರೀ ಪುರಂದರ ವಿಠಲನ
ಬಂದಪ್ಪುತಿಹ ಪುಣ್ಯವೆಲ್ಲಿ ಪಡೆದಳೊ ‖ ೧೧ ‖

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಗೋಪಿ = ಯಶೋದಾ

ಕುಕ್ಷಿ = ವಡಲು, ಹೊಟ್ಟೆ

ಈರೇಳು ಜಗವನೆಲ್ಲ – (ಎರಡು ಏಳು) ಹದಿನಾಲ್ಕು ಲೋಕಗಳನ್ನು.

ವೇದ ತತಿಗಳಿಂದ – ವೇದಗಳ ಸಮೂಹದಿಂದ (ನಾಲ್ಕು ವೇದಗಳು, ಆರು ವೇದಾಂಗಗಳು).

ಹೊಲಬು – ರೀತಿ, ಬಗೆ.

ಒಣಗಿದ ತನು – ತಪಸ್ಸಿನಿಂದ ಕೃಶವಾದ ದೇಹ.

ಎಂದು – ಎಂದಿಗೂ.

ಈರಡಿ = ಎರಡು ಪಾದ

ವಸುಮತಿ = ವಸುಧೆ = ಭೂಮಿ

ಜಗದುದರ = ಜಗತ್ತೆಲ್ಲವನ್ನು ಉದರದಲ್ಲಿ ಇರಿಸಿಕೊಂಡವ (ಭಾ.ತಾ.ನಿ. ೧ - ೨)

ಶಶಿಮುಖಿ = ಯಶೋದೆ

ಭೋಗಿಶಯನ = ಶೇಷಶಾಯಿ

ಯೋಗನಿದ್ರೆ = ಯುಗಾಂತ್ಯದಲ್ಲಿ ವಿಷ್ಣು ಮಾಡುವ ನಿದ್ರೆ

ಫಣಿಪತಿ = ಶೇಷ

ಸಮ್ಮೋದ ಸಮ್ಮೋಹ = ಆನಂದ ಸ್ವರೂಪಿಯಾದ ತಾನು (ವಿಷ್ಣು) ಜಗತ್ತನ್ನು ಮೋಹಗೊಳಿಸುವವನು

ರಕ್ಪೆ = ಅಂಗಾರ

ಪ್ರಣವ = ಓಂಕಾರ

ಅಣಕವಾಡುವ = ಚೇಷ್ಟೆ ಮಾಡುವ

ಕುಡಿ ಬೆರಳು = ಬೆರಳ ತುದಿ

ನೇವರಿಸು = ಸವರಿಸು, ಒರಣಗೊಳಿಸು

Classification: Keerthane
Ankita: sri purandara vittala
Location: NA
Category: Krishna Leele
Sub-Category: loka, gopi, yashode, pakshi, deva, punya, samudra, pati, veda, japa, bangara, gubbi, bhumi, niru, patni, muni, brahma, shiva, ananda, Krishna, halu, abharana, udara, kannu, kai, bali,
Pravachana: NA
Explanation: NA